ಬಾಲ್ಯದಲ್ಲಿ ವ್ಯಕ್ತಿಯ ಮನದ ಮೇಲಾದ ಗಾಯಗಳು ಬದುಕಿನ ಉದ್ದಕ್ಕೂ ವ್ರಣಗಳಾಗಿ ರಸಿಯಾಡುತ್ತಿರುತ್ತವೆ. ಪರಿಣಾಮವಾಗಿ ಪುನರಪಿ ಕಾಡುತ್ತವೆ. ಸ್ವತಃ ಮನಃಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಕುವೆಂಪು ಅವರು ಈ ಉಲಿಯನ್ನು ಯಥೇಚ್ಛವಾಗಿ ಬಳಸಿರುವುದನ್ನು ಕಂಡಾಗ ಅದು ಅವರ ವ್ಯಕ್ತಿತ್ವದ ಮೇಲೆ ಮಾಡಿರುವ ಪರಿಣಾಮವನ್ನು ಧ್ವನಿಸುತ್ತದೆ. ಕಥೆಗಾರನನ್ನು ನಂಬದೆ ಕಥೆಯನ್ನು ನಂಬಿದಾಗಲೂ ಈ ಮಾತನ್ನು ಧೈರ್ಯವಾಗಿ ಹೇಳಬಹುದು. ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಗುರುತಿಸಬೇಕಾಗಿರುವುದು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಬರುವ ಪ್ರಸಕ್ತ ಉಲಿಯ ನಿದರ್ಶನಗಳಲ್ಲಿ ಹೆಚ್ಚಿನವು ಹೆಣ್ಣಿನ ರೋದನಗಳೇ ಆಗಿರುವುದು.

ಮಹಾಕಾವ್ಯದಲ್ಲಿ 'ಗೋಳ್ದನಿ'ಯಾಗಿ ವ್ಯಕ್ತವಾಗುವ 'ಓ' ವಾಕ್‌ಪ್ರತಿಮೆ ಕಾವ್ಯದಲ್ಲಿ ಇನ್ನೊಂದು ಮಗ್ಗುಲಿಗೆ ಹೊರಳುತ್ತದೆ. ಇಲ್ಲಿ ಕರೆಗೊಡುವ ಸಂದೇಶದಂತೆ ಕಾಣಿಸಿಕೊಳ್ಳುತ್ತದೆ. ನಿದರ್ಶನಕ್ಕಾಗಿ ಅವರ ಜನಪ್ರಿಯ ಕವಿತೆಗಳನ್ನೇ ಎತ್ತಿಕೊಳ್ಳಬಹುದು. 'ಓ ಬನ್ನಿ ಸೋದರರೆ', 'ಓ ನನ್ನ ಚೇತನ', 'ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯಶಿವ' ಕವಿತೆಗಳಲ್ಲಿ ಸರ್ವಾದರಣೀಯವಾದ ಸಮಸಮಾಜವನ್ನು ಕಟ್ಟುವ ಕೆಲಸದಿಂದ ವಿಮುಖರಾಗಿ ಜಾತಿ, ಮತ, ಮೌಢ್ಯಗಳೇ ಮುಂತಾದ ಉಪಾದಿಗಳಲ್ಲಿ ಕಳೆದು ಬಹುದೂರ ಹೋಗಿರುವ ಜನ ಸಮುದಾಯವನ್ನು ಕೂಗಿ ಕರೆಯುವ ಘೋಷನಾದವಾಗಿ 'ಓ' ಪ್ರತಿಧ್ವನಿಸಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ನಮ್ಮಿಂದ ದೂರವಿರುವವರನ್ನು 'ಓ' ಎಂದು ಕೂಗಿ ಕರೆಯುವಂತೆ ಸಮಸಮಾಜದ ಆಶಯಗಳಿಂದ ಬಹುದೂರ ನಿಂತಿರುವವರನ್ನು ಮಹತ್ತಾದ ಕಾರ್ಯವೊಂದಕ್ಕೆ ಆಮಂತ್ರಿಸುವ ಕರೆಗಂಟೆಯಂತೆ ಅವರ ಕಾವ್ಯದಲ್ಲಿ 'ಓ' ಉಕ್ತಿ ಬಳಕೆಯಾಗುತ್ತದೆ. 'ಶ್ರೀರಾಮಾಯಣ ದರ್ಶನಂ'ನಲ್ಲಿ ಮೆದುವಾಗಿ, ಕೆಲವೊಮ್ಮೆ ಚೀರಾಟದಂತೆ ಕಾಣಿಸಿಕೊಂಡರೆ ಇಲ್ಲಿ ಹಾದಿ ತಪ್ಪಿ, ಎಲ್ಲೆಲ್ಲೋ ಹೋಗುತ್ತಿರುವವರನ್ನು ಸ್ಫಟಿಕದ ಸಲಾಕೆಯಂತೆ ಬೆಳಕಿನ ದಾರಿಯಲ್ಲಿ ನಡೆಯಲು ಪ್ರೇರೇಪಿಸುತ್ತದೆ. ಕಾವ್ಯದ ಮೂಲಕ




ಕೊನೆಗೊಳ್ಳುವ 'ಕಾನೂರು ಹೆಗ್ಗಡತಿ' ಕಾದಂಬರಿ – 'ಕಣ್ದೆರೆಯಿರಿ ನವಕಾಂತಿಗೆ, ಶಾಂತಿಗೆ, ಓ ಕ್ರಾಂತಿಯ ಪುತ್ರರೆ, ಬಾಳಿ!' ಎಂದು ಬುದ್ಧನ ಕರುಣಾಮೈತ್ರಿಯ ಹಾದಿಯನ್ನು ತೋರಿಸಿ ಮುಕ್ತಾಯವಾಗುತ್ತದೆ.

ಕುವೆಂಪು ಅವರ ಒಟ್ಟು ವಾಙ್ಮಯ ಸ್ಪಷ್ಟ ವೈಚಾರಿಕ ಪ್ರಣಾಲಿಯಿಂದಲೇ ಅಭಿವ್ಯಕ್ತಿಗೊಂಡಿದೆ ಎಂದರೆ ಹೊಸ ವ್ಯಾಖ್ಯಾನವೊಂದನ್ನು ಹುಟ್ಟಿಸಿದಂತಾಗುವುದಿಲ್ಲ. ಆದರೆ, ಅವರ ಕಾವ್ಯ ಮತ್ತು ವೈಚಾರಿಕ ಬರಹಗಳನ್ನು ಜಾಗೃತರಾಗಿ ಗಮನಿಸಿದರೆ ಜಾತಿ, ಮತ, ಭಾಷೆ ಮುಂತಾದ ಮಾನವನಿರ್ಮಿತ ಉಪಾದಿಗಳ ವ್ಯೂಹಗಳಲ್ಲಿ ಸಿಲುಕಿ ಹೊರಬರಲಾರದೆ ತೊಳಲಾಡುತ್ತಿರುವ ತನ್ನ ನಾಡವರನ್ನು ಆ ವ್ಯೂಹದಿಂದ ಬಿಡಿಸಿ ಹೊರ ತರುವ ದಾರಿಗಳನ್ನು ತೋರುವ ದಾರ್ಶನಿಕನ ಪಾತ್ರವನ್ನು ಅವರು ವಹಿಸಿರುವುದನ್ನು ಕಾಣಬಹುದಾಗಿದೆ. ಆದ್ದರಿಂದಲೇ, ಹಾದಿ ತಪ್ಪುತ್ತಿರುವ ಮಂದಿಯನ್ನು ಮತ್ತೆ ಮತ್ತೆ 'ಓ' ಎಂದು ಕೂಗಿ ಕರೆದು ಸರಿದಾರಿಯನ್ನು ತೋರಬೇಕಾದ ಹೊಣೆಗಾರಿಕೆಯನ್ನು ಕವಿ ನಿಭಾಯಿಸಿದ್ದಾರೆ.

ಸಮಸಮಾಜದ ಅವರ ಕನಸನ್ನು 'ಓ' ಎನ್ನುವ ಕರೆಗಂಟೆಯ ರೂಪದ ಉಕ್ತಿ ಪುನರಪಿ ಕಾಣಿಸಿಕೊಂಡು ದರ್ಶನಧ್ವನಿಯಾಗಿ ಅವರ ಒಟ್ಟು ಅಭಿವ್ಯಕ್ತಿಯಲ್ಲಿ ಹೊರಹೊಮ್ಮಿದೆ. ●